# ಕರ್ನಾಟಕ ರಕ್ಷಣಾ ವೇದಿಕೆ

ಸನ್ಮಾನ್ಯ ರಾಜ್ಯಪಾಲರಿಗೆ, ದಿನಾಂಕ : 08 ಜನವರಿ, 2008
ಕರ್ನಾಟಕ ರಾಜ್ಯ

ಮಾನ್ಯರೇ:

ವಿಷಯ : ಕೇಂದ್ರ ಸರ್ಕಾರಿ ಸ್ವಾಮ್ಯದ ರೈಲ್ವೇ ಇಲಾಖೆಯ ನೈಋುತ್ಯ ವಲಯದಲ್ಲಿನ ಖಾಲಿ ಹುದ್ದೆಗಳಲ್ಲಿ ಕನ್ನಡಿಗರ ನೇಮಕಾತಿಗಾಗಿ ಹಕ್ಕೊತ್ತಾಯ

ಇತ್ತೀಚಿಗೆ, ಹುಬ್ಬಳ್ಳಿಯಲ್ಲಿ ತನ್ನ ಕೇಂದ್ರ ಕಛೇರಿ ಹೊಂದಿರುವ, ಬಹುತೇಕ ಕರ್ನಾಟಕವನ್ನು ವ್ಯಾಪಿಸಿರುವ ನೈಋುತ್ಯ ವಲಯದಲ್ಲಿ ಡಿ ವರ್ಗದ 4700 ಹುದ್ದೆಗಳು ಖಾಲಿ ಇದ್ದು ಅವುಗಳನ್ನು ಭರ್ತಿಮಾಡಲು ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. ಈ ಪ್ರಕ್ರಿಯೆಯಲ್ಲಿ ಕನ್ನಡಿಗರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಈ ಅನ್ಯಾಯದ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸಿ ಸರಿಯಾದ ವಿಧಾನದಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಮತ್ತೆ ನಡೆಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆಯು ಕೇಂದ್ರ ಸರ್ಕಾರಕ್ಕೆ, ಸಂಬಂಧಿಸಿದ ಇಲಾಖೆಗೆ ಗೌರವಾನ್ವಿತ ರಾಜ್ಯಪಾಲರಾದ ತಮ್ಮ ಮೂಲಕ ಕನ್ನಡಿಗರ ಹಕ್ಕೊತ್ತಾಯವನ್ನು ಸಲ್ಲಿಸುತ್ತದೆ.

ರೈಲ್ವೇ ಇಲಾಖೆಯು ತನ್ನ 21.07.2007ರ ಉದ್ಯೋಗ ಸೂಚನೆ ಸಂಖ್ಯೆ 01/2007 (ಇ.ಎನ್.01/2007)ದ ಮೂಲಕ ನೇಮಕಾತಿಯ ಬಗ್ಗೆ ಆದೇಶ ಹೊರಡಿಸಿತು. ಎಂಟನೇ ತರಗತಿಯ ವಿದ್ಯಾರ್ಹತೆಯನ್ನು ಬಯಸುವ ಈ ಹುದ್ದೆಗಳಿಗೆ ಅರ್ಜಿಯನ್ನು ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿಯೇ ಬರೆಯಬೇಕೆಂಬ ನಿಯಮವನ್ನು ವಿಧಿಸುವ ಮೂಲಕ ಕನ್ನಡಿಗರಿಗೆ ಅರ್ಜಿ ಸಲ್ಲಿಸುವಾಗಲೇ ಪ್ರವೇಶ ತಡೆಯನ್ನು ಒಡ್ಡಲಾಯಿತು.

ರೈಲ್ವೇ ಇಲಾಖೆಯ ಆದೇಶದ ಈ ಭಾಗವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇವೆ.

[8. ವೈಯುಕ್ತಿಕ ಮಾಹಿತಿ ಪತ್ರವೂ ಸೇರಿದಂತೆ ಅರ್ಜಿ ಸಲ್ಲಿಸಬೇಕಾದ ವಿಧಾನ:

ಅರ್ಜಿಯನ್ನು ತುಂಬುವ ಮುನ್ನ ಅಭ್ಯರ್ಥಿಯು ಉದ್ಯೋಗ ಸೂಚನೆಯನ್ನು ಜಾಗ್ರತೆಯಿಂದ ಓದಿಕೊಳ್ಳಬೇಕು. ಅರ್ಜಿಯನ್ನು (ವೈಯುಕ್ತಿಕ ಮಾಹಿತಿಯೂ ಸೇರಿದಂತೆ) ಉತ್ತಮ ಗುಣಮಟ್ಟದ A4 (210ಮಿಮಿ X 297ಮಿಮಿ ) ಅಳತೆಯ ಬಿಳಿಯ ಹಾಳೆಯ ಒಂದು ಬದಿಯಲ್ಲಿ ಸಿದ್ಧಪಡಿಸಬೇಕು. ನೇಮಕಾತಿ ಸೂಚನೆಯಲ್ಲಿ ಕೊಡಲಾಗಿರುವ ಮಾದರಿಯನ್ನೇ ಬಳಸಬೇಕು. ಅಭ್ಯರ್ಥಿಗಳು ಅಗತ್ಯ ಮಾಹಿತಿಯನ್ನು ತಮ್ಮ ಕೈಬರಹದಲ್ಲಿಯೇ **ಕಪ್ಪು ಬಣ್ಣದ ಶಾಯಿ ಅಥವ ಕಪ್ಪು ಬಾಲ್‌ಪೆನ್** ಬಳಸಿ ಬರೆಯಬೇಕು. **ಅರ್ಜಿಯನ್ನು ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿಯೇ ಬರೆಯಬೇಕು ಮತ್ತು ಬೇರೆ ಭಾಷೆ ಬಳಸಬಾರದು. ಅರ್ಜಿಯಲ್ಲಿ ದಿನಾಂಕ ಮತ್ತು ಸಹಿ ಇರಬೇಕು.** ಹಿಂದಿ/ ಇಂಗ್ಲಿಷ್ ಭಾಷೆಯಲ್ಲದೆ ಬೇರೆ ಭಾಷೆಯಲ್ಲಿ ಬರೆದ, ಅರ್ಜಿದಾರನಲ್ಲದೆ ಬೇರೆ ಯಾರಾದರೂ ತುಂಬಿದ ಮತ್ತು ಸೂಚಿಸಿದ ನಮೂನೆಯಲ್ಲದೆ ಬೇರೆ ನಮೂನೆಯಲ್ಲಿರುವ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.]

(ಇದು ಮೂಲ ಸೂಚನೆಯ ಕನ್ನಡ ಅನುವಾದ)

ಕರ್ನಾಟಕ ರಾಜ್ಯದಲ್ಲಿನ ಹುಬ್ಬಳ್ಳಿ, ಬೆಂಗಳೂರು, ಮೈಸೂರು, ಹುಬ್ಬಳ್ಳಿ ರೈಲು ವರ್ಕ್‌ಶಾಪ್, ಮೈಸೂರಿನ ರೈಲು ವರ್ಕ್‌ಶಾಪ್ ಮತ್ತು ಬೆಂಗಳೂರಿನ ಯಲಹಂಕದ ಅಚ್ಚು ಮತ್ತು ಗಾಲಿ ಕಾರ್ಖಾನೆಯಲ್ಲಿ ಕೆಲಸಗಳು ಖಾಲಿ ಇದ್ದು ಇಲ್ಲಿ ಕೆಲಸಮಾಡಲು ಹಿಂದಿ ಕಲಿತಿರಬೇಕೆಂಬ ನಿಬಂಧನೆ ವಿಧಿಸುವ ಉದ್ದೇಶವೇ ಕನ್ನಡಿಗರನ್ನು ನೇಮಕಾತಿಯಿಂದ ದೂರವಿಡುವುದೇ ಆಗಿದೆ. ಎಂಟನೇ ತರಗತಿಯನ್ನು ಕಲಿತಿರುವ ಯಾವುದೇ ವ್ಯಕ್ತಿ ತನ್ನ ಭಾಷೆಯಲ್ಲದೆ ಮತ್ತೊಂದು ಭಾಷೆಯಲ್ಲಿ ಅರ್ಜಿ ಸಲ್ಲಿಸಬಲ್ಲಷ್ಟು ಶಕ್ತನಾಗಿರುತ್ತಾನೆ ಎಂದು ಭಾವಿಸುವುದೇ ಬಾಲಿಷ. ಇದರ ಒಟ್ಟು ಸಾರಾಂಶವೇ ಹಿಂದಿ ತಾಯಿನುಡಿಯಾದ ಅಭ್ಯರ್ಥಿಗಳ ಪ್ರವೇಶಕ್ಕೆ ಅನುವು ಮಾಡಿಕೊಡುವುದು ಮಾತ್ರವೇ ಆಗಿದೆ. ಈ ಪತ್ರಿಕಾ ಪ್ರಕಟಣೆಯನ್ನು ನಮ್ಮ ರಾಜ್ಯದ ಪತ್ರಿಕೆಗಳಲ್ಲಿ ಕಾಟಾಚಾರಕ್ಕೆ ಪ್ರಕಟಿಸುವ ಇಲಾಖೆ ಈ ಹುದ್ದೆಗೆ ಅರ್ಜಿಗಳು ಸಹಜವಾಗಿಯೇ ಹಿಂದಿ ಭಾಷಿಕರು ಸಲ್ಲಿಸಲು ಸುಲಭ ಮಾಡಿಕೊಟ್ಟಿರುವುದು ಅಕ್ಷಮ್ಯ.

ಯಾವುದೇ ರಾಜ್ಯದಲ್ಲಿನ ಆರ್ಥಿಕ ಬೆಳವಣಿಗೆಗಳು ಅಲ್ಲಿ ಉದ್ದಿಮೆಗಳು ಆರಂಭವಾಗುವುದರಿಂದ ಆಗುತ್ತದೆ ಎಂಬುದು ಸರ್ವವಿದಿತ. ಆದರೆ ಹಾಗೆ ಆರಂಭವಾಗುವ ಉದ್ದಿಮೆಗಳು ಆಯಾ ಪ್ರದೇಶದ ಜನತೆಗೆ ಕೆಲಸ ನೀಡಿ, ನಿರುದ್ಯೋಗ ಸಮಸ್ಯೆಗೆ ಕೊನೆ ಹಾಡಬೇಕಾದದ್ದು ಮೂಲ ಕರ್ತವ್ಯವಾಗಿದೆ. ಇದು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಖಾಸಗಿ ವಲಯ ಎಲ್ಲದಕ್ಕೂ ಅನ್ವಯಿಸುತ್ತದೆ. ಕರ್ನಾಟಕದಲ್ಲಿನ ರೈಲ್ವೇ ಇಲಾಖೆ ಕನ್ನಡಿಗರಿಗೆ ಉದ್ಯೋಗ ನೀಡುವುದು ಅದರ ಹೊಣೆಯಾಗಿದೆ. ಇದನ್ನು ನಿರ್ವಹಿಸದೆ ಒಂದು ಭಾಷೆಯ/ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡಲು ತಾನೇ ಟೊಂಕ ಕಟ್ಟಿ ನಿಂತಿರುವುದು ದೇಶದ ಒಕ್ಕೂಟ ವ್ಯವಸ್ಥೆಗೇ ಅಪಮಾನ ಮಾಡಿದಂತೆ. ಬಿಹಾರಿನಿಂದ ಬರುವ ಅಭ್ಯರ್ಥಿಗಳಿಗೆ ಉಚಿತವಾಗಿ ಪ್ರಯಾಣ, ವಿಶೇಷ ಭೋಗಿ, ಊಟ ತಿಂಡಿ ವ್ಯವಸ್ಥೆ ಮಾಡಿಕೊಡುವ ಮೂಲಕ ಪಕ್ಷಪಾತತನವನ್ನು ತೋರಿಸುತ್ತಿರುವುದು ಸ್ಪಷ್ಟವಾಗಿದೆ.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇಡೀ ನೇಮಕಾತಿ ಪ್ರಕ್ರಿಯೆಯನ್ನು ಕೂಡಲೇ ಅಕ್ರಮವೆಂದು ಘೋಷಿಸಿ, ತಕ್ಷಣದಿಂದಲೇ ರದ್ದು ಮಾಡಿ ಮತ್ತೆ ಹೊಸದಾಗಿ ಕನ್ನಡಿಗರಿಗೆ ಕೆಲಸ ದೊರೆಯಲು ಅನುವಾಗುವಂತೆ ಕ್ರಮ ತೆಗೆದುಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಬೇಕೆಂದು ಆಗ್ರಹಿಸುತ್ತೇವೆ.

# ಕರ್ನಾಟಕ ರಕ್ಷಣಾ ವೇದಿಕೆ

**ಹಕ್ಕೊತ್ತಾಯಗಳು :**

1. ಈಗ ನಡೆಯುತ್ತಿರುವ ನೇಮಕಾತಿ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದು ಮಾಡಬೇಕು
2. ಕನ್ನಡ ನಾಡಿನಲ್ಲಿನ ಈ ಹುದ್ದೆಗಳಿಗೆ ಕನ್ನಡ ಭಾಷೆಯಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಕಡ್ಡಾಯ ಮಾಡಬೇಕು
3. ಈ ಹುದ್ದೆಗಳ ಬಗೆಗಿನ ಜಾಹಿರಾತುಗಳನ್ನು ನಾಡಿನ ಎಲ್ಲ ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ಪತ್ರಿಕೆಗಳಲ್ಲಿ ಒಂದು ವಾರದ ಕಾಲ ಪ್ರಕಟಣೆ ಮಾಡಬೇಕು.
4. ಈ ನೇಮಕಾತಿಯ ಅಂಗವಾಗಿರುವ ಮೀಸಲಾತಿಗಳನ್ನು ಕನ್ನಡಿಗರಿಗೇ ಕೊಡಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ನಿವೃತ್ತ ಸೈನಿಕರಿಗೆ ಮೀಸಲಾದ ಹುದ್ದೆಗಳು ಕನ್ನಡದ ಪರಿಶಿಷ್ಟ ಜಾತಿಯವರಿಗೆ, ಕನ್ನಡದ ಪರಿಶಿಷ್ಟ ಪಂಗಡದವರಿಗೆ, ಕನ್ನಡದ ನಿವೃತ್ತ ಸೈನಿಕರಿಗೇ ಮೀಸಲು ಮಾಡಬೇಕು.

ಕನ್ನಡ ಜನತೆ ಶಾಂತಿಪ್ರಿಯರು, ಸಹೃದಯರು ಎಂಬುದು ಜನಜನಿತವಾದ ಅಭಿಪ್ರಾಯ. ಕನ್ನಡಿಗರ ಈ ಸದ್ಗುಣಗಳನ್ನೇ ನಮ್ಮ ದೌರ್ಬಲ್ಯವೆಂದು ಭಾವಿಸಿ ಕನ್ನಡಿಗರ ಉದ್ಯೋಗದ ಆ ಮೂಲಕ ಬದುಕುವ ಹಕ್ಕಿಗೇ ಸಂಚಕಾರ ತರುತ್ತಿರುವ ರೈಲ್ವೇ ಇಲಾಖೆಯ ಈ ದುರದೃಷ್ಟಕರ ನಡೆ ಕನ್ನಡಿಗರ ಸಹನೆಯನ್ನು ಕೆಣುಕುತ್ತಿರುವುದು ನಿಜ. ಕನ್ನಡಿಗರ ಈ ಶಾಂತಿಯುತ ಹೋರಾಟಗಳನ್ನು ಹಗುರವಾಗಿ ಪರಿಗಣಿಸದೆ ನಮ್ಮ ಹಕ್ಕನ್ನು ಮಾನ್ಯ ಮಾಡಲು ಕೇಂದ್ರ ಸರ್ಕಾರ ಮುಂದಾಗಬೇಕು. ಮೂಲೆಗೊತ್ತಿದರೆ ಬೆಕ್ಕೂ ತಿರುಗಿ ಬೀಳುವಂತೆ ಕನ್ನಡಿಗರು ಕೇಂದ್ರ ಸರ್ಕಾರದ, ಒಕ್ಕೂಟ ವ್ಯವಸ್ಥೆಯ ಹೆಸರಲ್ಲಿ ನಡೆಸಲಾಗುತ್ತಿರುವ ಈ ದೌರ್ಜನ್ಯದ ವಿರುದ್ಧ ಸೆಟೆದು ಉಗ್ರ ಹೋರಾಟಕ್ಕೆ ಮುಂದಾಗುವುದನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇವೆ.

ಭಾರತ ದೇಶದ ಸಂವಿಧಾನದ 16ನೇ ಅನುಚ್ಛೇದದ ಆಶಯದಂತೆ ಭಾಷಾವಾರು, ಪ್ರದೇಶವಾರು ತಾರತಮ್ಯ ಮಾಡುವುದು ಅಪರಾಧ. ಕನ್ನಡಿಗರನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸುವ ವ್ಯವಸ್ಥೆ ಹೊಂದಿರುವ ಈ ನೇಮಕಾತಿಯನ್ನು ತಡೆಹಿಡಿಯುವ ಮೂಲಕ ಕನ್ನಡಿಗರ ಮೂಲಭೂತ ಹಕ್ಕನ್ನು ಮಾನ್ಯ ಮಾಡಬೇಕೆಂದು ಆಗ್ರಹಿಸುತ್ತೇವೆ. ಕನ್ನಡಿಗರೂ ಭಾರತೀಯರೇ, ಕರ್ನಾಟಕವೂ ಭಾರತವೇ ಎಂಬುದನ್ನು ಮರೆಯದೆ ಕೂಡಲೇ ಕ್ರಮ ತೆಗೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಆಗುವ ಅನಾಹುತಗಳು ಕಾನೂನು ವ್ಯವಸ್ಥೆಯನ್ನೇ ಏರುಪೇರು ಮಾಡೀತೆಂಬ ಆತಂಕವನ್ನು ವ್ಯಕ್ತಪಡಿಸುತ್ತಾ ಇಂತಹ ಬೆಳವಣಿಗೆಗಳಿಗೆ ಕೇಂದ್ರ ಸರ್ಕಾರ ಅನುವು ಮಾಡಿಕೊಡುವುದಿಲ್ಲವೆಂಬ ಭರವಸೆಯೊಂದಿಗೆ ತಮ್ಮಿಂದ ಮುಂದಿನ ಸೂಕ್ತಕ್ರಮಗಳನ್ನು ನಿರೀಕ್ಷಿಸುತ್ತೇವೆ.

ವಿಶ್ವಾಸದೊಂದಿಗೆ

ಟಿ.ಎ.ನಾರಾಯಣಗೌಡ
ರಾಜ್ಯಾಧ್ಯಕ್ಷರು,
ಕರ್ನಾಟಕ ರಕ್ಷಣಾ ವೇದಿಕೆ